**ಸಾಕ್ಷಿಯನ್ನು ದಿಃ 08.08.2024 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ದೂರನ್ನು ನಾನೇ ದಾಖಲಿಸಿರುತ್ತೇನೆ. ದೂರಿನಲ್ಲಿ ಯಶವಂತ್ ಮೋಟಾರ್ ಸೈಕಲ್ ಚಾಲನೆ ಮಾಡುತ್ತಿದ್ದು ನನ್ನ ಮಗ ಮತ್ತು ಧನುಷ್ ಹಿಂದೆ ಕುಳಿತುಕೂಂಡು ಹೋಗುತ್ತಿದ್ದರು ಎಂದು ಹೇಳಿರುತ್ತೇನೆ ಎಂದರೆ ಸಾಕ್ಷಿಯು ಗಾಬರಿಯಲ್ಲಿ ಆ ರೀತಿ ದೂರು ದಾಖಲಿಸಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಮಕ್ಕಳನ್ನು ಕೇಳಿಕೊಂಡು ಅಪಘಾತ ಆದ ರೀತಿಯ ಬಗ್ಗೆ ಮರುಹೇಳಿಕೆ ನೀಡಿರುವುದಿಲ್ಲ. ನಿಪಿ. 6 ದೋಷರೋಪಣಾ ಪಟ್ಟಿಯಲ್ಲಿಯೂ ಸಹ ಯಶವಂತ್ ಮೋಟಾರ್ ಸೈಕಲ್ ಚಾಲನೆ ಮಾಡುತ್ತಿದ್ದು ನನ್ನ ಮಗ ಮತ್ತು ಧನುಷ್ ಹಿಂದೆ ಕುಳಿತುಕೂಂಡು ಹೋಗುತ್ತಿದ್ದರು ಎಂದು ಹೇಳಿರುತ್ತಾರೆ ಎಂದರೆ ಸರಿ. ಅಪಘಾತ ಸಮಯದಲ್ಲಿ ನನ್ನ ಮಗ 8 ನೇ ತರಗತಿಯಲ್ಲಿ ಓದುತ್ತಿದ್ದನು. ಈಗ ಪ್ರಥಮ ಪಿ.ಯು.ಸಿ. ಓದುತ್ತಿದ್ದಾನೆ. ಅಪಘಾತ ಆದ ತಕ್ಷಣ ಮಹದೇಶ್ವರ ನರ್ಸಿಂಗ್ ಹೋಮ್ ಗೆ ಕರೆದುಕೊಂಡು ಹೋಗಿ ನಂತರ ಗೋಪಾಲಗೌಡ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಅಲ್ಲಿ ಒಂದು ವಾರ ದಾಖಲು ಮಾಡಿದ್ದೆ. ಅಲ್ಲಿ ದಾಖಲಾದ ಬಗ್ಗೆ ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಆಸ್ಪತ್ರೆಯವರು ಕೊಟ್ಟಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನಾನು ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ. 12 ರಲ್ಲಿ ಕಾಣಿಸಿರುವ ನನ್ನ ಮಗನ ಜನ್ಮ ದಿನಾಂಕ ಸರಿಯಾಗಿದೆ. ಅಪಘಾತ ಸಮಯದಲ್ಲಿ ನನ್ನ ಮಗನಿಗೆ 14 ವರ್ಷ ವಯಸ್ಸು ಇತ್ತು. ಯಶವಂತ್ ಮತ್ತು ಧನುಷ್ ನನ್ನ ಮಗನಿಗಿಂತ ಒಂದು ವರ್ಷ ದೊಡ್ಡವರು. ಡಾ. ಇದ್ರೀಶ್ ರವರು ನನ್ನ ಮಗನಿಗೆ ಚಿಕಿತ್ಸೆ ನೀಡಿರುತ್ತಾರೆ. ಕೊನೆಯ ಬಾರಿ ಒಂದು ತಿಂಗಳ ಹಿಂದೆ ನನ್ನ ಮಗನನ್ನು ಆಸ್ಪತ್ರೆಗೆ ಕರೆದುಕೂಂಡು ಹೋಗಿರುತ್ತೇನೆ. ಉಪಕರಣ ತೆಗೆದಿರುತ್ತಾರೆ. ನನ್ನ ಮಗನಿಗೆ ಯಾವುದೇ ಶಸ್ತ್ರ ಚಿಕಿತ್ಸೆ ಆಗಿರುವುದಿಲ್ಲ ಹಾಗಾಗಿ ಅದಕ್ಕೆ ಸಂಬಂಧಪಟ್ಟ ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ಆಸ್ಪತ್ರೆಗೆ ದಾಖಲಾದ ಬಗ್ಗೆ ದಾಖಲೆ ಇಲ್ಲದ ಕಾರಣ ಔಷಧಿ ಪಾವತಿ ರಶೀದಿಗಳ ವೆಚ್ಚ ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ. ಔಷಧಿ ಪಾವತಿ ರಶೀದಿಗಳನ್ನು

ಪರಿಹಾರಕ್ಕಾಗಿ ಸೃಷ್ಟಿಸಿಕೊಂಡು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮಗ ಈಗಲೂ ಚೆನ್ನಾಗಿ ಓಡಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಮಗ ಹೋಗುತ್ತಿದ್ದ ಬೈಕ್ ಅನ್ನು ಅಪ್ರಾಪ್ತ ವಯಸ್ಕ ಚಾಲನೆ ಮಾಡುತ್ತಿದ್ದ ಕಾರಣ 2 ನೇ ಎದುರುದಾರರು ಪರಿಹಾರ ನೀಡಲು ಬರುವುದಿಲ್ಲ ಎಂದರೆ ಸರಿಯಲ್ಲ.

ಅಪಘಾತ ಆದ ರಸ್ತೆ ನಾಲ್ಕು ರಸ್ತೆ ಕೂಡುವ ಜಂಕ್ಷನ್ ಎಂದರೆ ಸರಿ. ರಸ್ತೆಯ ಅಗಲ ನಾಲ್ಕು ದಿಕ್ಕಿನಿಂದ 5 ಮೀಟರ್ ಇರುವ ರಸ್ತೆ ಎಂದರೆ ಸರಿ. ನನ್ನ ಮಗ ಹೋಗುತ್ತಿದ್ದ ಬೈಕ್ ನಂ. ಕೆಎ-20-ಇಕೆ-9159 ಆಗಿರುತ್ತದೆ. ಅಪಘಾತ ರಸ್ತೆಯ ಮಧ್ಯಭಾಗದಲ್ಲಿ ಆಗಿದೆ ಎಂದರೆ ಸರಿಯಲ್ಲ. ಅಪಘಾತವು ರಸ್ತೆಯ ಅಂಚಿನಿಂದ 2 ಮತ್ತು 3 ಮೀಟರ್ ಗಳಷ್ಟು ದೂರದಲ್ಲಿ ಆಗಿರುತ್ತದೆ ಎಂದರೆ ಆ ಬಗ್ಗೆ ಗೊತ್ತಿಲ್ಲ. ಯಶವಂತ್ ಅಪ್ರಾಪ್ತ ವಯಸ್ಕನಾಗಿದ್ದು ಮೋಟಾರ್ ಸೈಕಲ್ ಚಾಲನೆ ಮಾಡಲು ಬರದೇ ಇರುವ ಕಾರಣ ಆತನ ತಪ್ಪಿನಿಂದಲೇ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.